ಆದುದರಿಂದ ಆಗ ಅವರು ಅದನ್ನು ಅನುಷ್ಠಾನಕ್ಕೆ ತರಲು ಅನುಕೂಲವಾಗಿತ್ತು. ಅವರು ದೊಡ್ಡ ಪ್ರಯೋಗ ಶೀಲ ವ್ಯಕ್ತಿಯಾಗಿದ್ದ, ಅಧಿಕಾರದಲ್ಲಿದ್ದಾಗ ಯಾವುದೇ ವಿಧವಾದುಂಥ ಒಂದು ಸಾಧನೆ ಮಾಡ ಬೇಕೆಂದು ಹೊರಟಾಗ ಅದನ್ನು ಸಾಧನೆ ಮಾಡಿದುಂಥ ಸಂತೃಪ್ತಿ ಅವರಲ್ಲಿತ್ತು. ಅಧಿಕಾರದಿಂದ ಹೊರಕ್ಕೆ ಹೋದಾಗ ರಚನಾತ್ಮಕವಾಗಿ ವಿರೋಧ ಪಕ್ಷಗಳನ್ನು ಸಂಘಟಿಸಬೇಕು ತನ್ಮೂಲಕ ದೇಶವನ್ನು ಕಟ್ಟ ಬೇಕೆಂದು ಅವರು ಪ್ರಾಮಾಣಿಕ ಅನಿಸಿಕೆಯಾಗಿತ್ತು. ಇದಕ್ಕಾಗಿ ಸತತವಾಗಿ ಪ್ರಯತ್ನ ಮಾಡುತ್ತಿದ್ದರು, ಹೋರಾಟ ಮಾಡುತ್ತಿದ್ದರು ಅದನ್ನು ನಾವು ಇತ್ತಕಡೆ ನಿಂತು ನೋಡುತ್ತಿದ್ದೆವು. ಆದರೂ ಅವರು ಅನೇಕ ಸಂದರ್ಭದಲ್ಲಿ ನಿರಾಸೆಯನ್ನು ಎದುರಿಸಬೇಕಾದ ಪ್ರಸಂಗ ಬಂದಿತ್ತು. ವಿರೋಧ ಪಕ್ಷಗಳ ಸಂಘಟನೆ ಮಾಡಿ, ರಚನಾತ್ಮಕವಾಗಿ ಈ ದೇಶವನ್ನು ಕಟ್ಟತಕ್ಕ ಮೂಲ ಪ್ರವಾಹದಲ್ಲಿ ವಿರೋಧ ಪಕ್ಷ ಗಳನ್ನು ಸೇರಿಸುವ ಬಲದಲ್ಲಿ ಸಫಲವಾಗದೇ ಇದ್ದಾಗ ಅವರು ಅನೇಕ ಸಾರಿ ಸಂಕಷ್ಟಗಳನ್ನು ಪಡತಕ್ಕ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಅವರ ಆಸೆ ಏನು ಪೂರ್ತಿಯಾಗಿಲ್ಲ ಅದನ್ನು ಪೂರ್ತಿ ಮಾಡತಕ್ಕ ಸಂಕಲ್ಪವನ್ನು ನೀವು ನಾವು ಎಲ್ಲಾ ಮಾಡಬೇಕಾದ ಅವಶ್ಯಕತೆ ಇದೆ ಎಂದು ಹೇಳಿ ನನ್ನ ಎರಡು ಮಾತು ಗಳನ್ನು ಮುಗಿಸುತ್ತೇನೆ.

ಳ–೩೦ ಪಿ. ಎಂ.

ಅಧ್ಯಕ್ಷರು.—ಸದನದ ಮಾನ್ಯ ಸದಸ್ಯರು ವ್ಯಕ್ತಮಾಡಿದುಂಥ ಭಾವನೆಗಳಿಗೆ ನನ್ನ ಧ್ವನಿಯನ್ನು ಕೂಡಿಸುತ್ತ, ಸದನ ಪಾಸ್ ಮಾಡಿರುವತಕ್ಕಂಥ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಡುತ್ತ, ಈಗ ಮಾನ್ಯ ಸದಸ್ಯರು ಎದ್ದು ನಿಂತು ಎರಡು ನಿಮಿಷ ಮೌನವನ್ನು ಆಚರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಸಭೆ ಎದ್ದುನಿಂತು ಎರಡು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಕಳೆದ ಅಧಿವೇಶನವನ್ನು ಮುಂದೂಡಿವ ನಂತರ ನಿಧನರಾದ ಕೆಳಕಂಡ ವ್ಯಕ್ತಿಗಳ ಬಗ್ಗೆ ಸಂತಾಪ ಸೂಚಿಸಲು ನಾನು ವಿಷಾದಿಸುತ್ತೇನೆ.

೧ ೧೯೩೦ ರಿಂದ ೧೯೪೦ರ ವರೆಗೆ ಹಾಗೂ ೧೯೪೧ ರಿಂದ ೧೯೫೫ರ ವರೆಗೆ ಒಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಜಿ. ಶಂಕರಶೆಟ್ಟಿ ಅವರು ೩೧–೩–೧೯೮೨ರಂದು ನಿಧನರಾದರು.

೨ ಮುಂಬಯಿಯ ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ೧೯೫೭ರ ನವೆಂಬರ್ ೧ ರಿಂದ ೧೯೫೭ರ ವರೆಗೆ ಮೈಸೂರು ವಿಧಾನಸಭೆಯ ಸದಸ್ಯರಾಗಿದ್ದ ಶ್ರೀ ಸಿದ್ದಪ್ಪ ಚನ್ನಬಸಪ್ಪ ಸಿಂದೂರ್ ಅವರು ೬–೪–೧೯೮೨ರಂದು ನಿಧನರಾದರು.

೩ ೧೯೪೧–೪೫ ಹಾಗೂ ೧೯೪೫–೪೯ರ ವರೆಗೆ ಎರಡು ಬಾರಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯ ರಾಗಿದ್ದ ಶ್ರೀ ಕೆ. ನಾಗಭೂಷಣ ಭಟ್ ಅವರು ೭–೪–೧೯೮೨ರಂದು ನಿಧನರಾದರು.

೪ ೧೯೫೨–೫೭ರ ಅವಧಿಯಲ್ಲಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಬಿ. ಚಿಕ್ಕಣ್ಣ ಅವರು ೨೫–೪–೧೯೮೨ರಂದು, ನಿಧನರಾದರು.

೫ ೧೯೫೭–೬೩ರ ಅವಧಿಯಲ್ಲಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ವೆಂಕಟರೆಡ್ಡಿ ಅವರು ೬–೫–೧೯೮೨ರಂದು ನಿಧನರಾದರು.

ಈ ಎಲ್ಲಾ ಸದಸ್ಯರ ಗೌರವಾರ್ಥ ಸದನ ಎರಡು ನಿಮಿಷ ಮೌನವನ್ನು ಆಚರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಸಭೆ ಎದ್ದುನಿಂತು ಎರಡು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಇಂದಿನ ಕಾರ್ಯಕಲಾಪಗಳನ್ನು ನಾಳೆಗೆ ಮುಂದೂಡಿ ನಾಳೆ ಮಧ್ಯಾಹ್ನ ಒಂದು ಗಂಟೆಗೆ ಸಭೆ ಸೇರುವುದು.

(The House adjourned at Thirty-five minutes past four of the Clock to meet again on Wednesday, the 9th June 1982 at One of the Clock)